**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 736 |
| ಮಾನ್ಯ ಸದಸ್ಯರ ಹೆಸರು: | ಶ್ರೀ ಚಿದಾನಂದ ಎಂ ಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 21.08.2026 |
| ಉತ್ತರಿಸುವ ಸಚಿವರು: | ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಆಯುಷ್ ಇಲಾಖೆಯ ತಾಲೂಕು, ಜಿಲ್ಲಾ ಹಾಗೂ ಮೇಲ್ದರ್ಜೆಯ ಆಸ್ಪತ್ರೆಗಳಲ್ಲಿ ಶಲ್ಯತಂತ್ರ, ಶಾಲಾಕ್ಯ, ಕಾಯಚಿಕಿತ್ಸೆ, ಪಂಚಕರ್ಮ, ಪ್ರಸೂತಿ ಮತ್ತು ಸ್ತ್ರೀರೋಗ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಎಷ್ಟು ಖಾಯಂ ತಜ್ಞ ವೈದ್ಯರ ಹುದ್ದೆಗಳು ಅಗತ್ಯವಿದೆ ಎಂಬುದರ ಕುರಿತು ಸರ್ಕಾರ ಯಾವುದೇ ಅಧ್ಯಯನ ನಡೆಸಿದೆಯೇ; | ಆಯುಷ್ ಇಲಾಖೆಯಲ್ಲಿ ಹಾಲಿ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ತಜ್ಞ ವೈದ್ಯರು ಎಂಬ ಪದನಾಮದಲ್ಲಿ ಯಾವುದೇ ಹುದ್ದೆಗಳು ಸೃಜನೆಯಾಗಿರುವುದಿಲ್ಲ.<br><br>ಪ್ರಸ್ತುತ ಇಲಾಖೆಯು ಕೇಂದ್ರ ಸರ್ಕಾರದ ವತಿಯಿಂದ ನೀಡಲಾಗಿರುವ IPHS ಮಾನದಂಡಗಳನ್ನು ಅನುಸರಿಸುತ್ತಿದ್ದು, ಸದರಿ ಮಾನದಂಡದಲ್ಲಿಯೂ ಸಹ 10/30/50 ಹಾಸಿಗೆಗಳ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ತಜ್ಞತೆವಾರು ಆಯುಷ್ ತಜ್ಞ ವೈದ್ಯ ಹುದ್ದೆಗಳನ್ನು ಅವಶ್ಯಕ (essential/desirable) ಹುದ್ದೆಗಳೆಂದು ಸೂಚಿಸಿರುವುದಿಲ್ಲ. ಈ ಕುರಿತಂತೆ ಸರ್ಕಾರವು ಯಾವುದೇ ಅಧ್ಯಯನ ನಡೆಸಿರುವುದಿಲ್ಲ. |
| ಆ) | ಅಧ್ಯಯನ ನಡೆಸಿದ್ದರೆ, ಒಟ್ಟು ಹೊಸ ಕಾಯಂ ತಜ್ಞ ವೈದ್ಯರ ಹುದ್ದೆಗಳನ್ನು ಸೃಜಿಸಲು ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ; ನೀಡದಿದ್ದರೆ, ಅದರ ಕಾರಣಗಳೇನು; | |
| ಇ) | ಹುದ್ದೆಗಳಿಲ್ಲದ ಕಾರಣ ಹೆಚ್ಚುವರಿ ಭತ್ಯೆ, ಹೆಚ್ಚುವರಿ ಜವಾಬ್ದಾರಿ ಅಥವಾ ತಾತ್ಕಾಲಿಕ ವ್ಯವಸ್ಥೆಗಳ ಮೂಲಕ ಸೇವೆ ಮುಂದುವರಿಸುವ ಬದಲು, ಖಾಯಂ ಹುದ್ದೆಗಳನ್ನು ಸೃಜಿಸುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಈ ಇಲಾಖೆಯಲ್ಲಿ ಹಾಲಿ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ತಜ್ಞ ವೈದ್ಯರು ಎಂಬ ಪದನಾಮದಲ್ಲಿ ಯಾವುದೇ ಹುದ್ದೆಗಳು ಸೃಜನೆಯಾಗಿರುವುದಿಲ್ಲ. IPHS ಮಾನದಂಡಗಳನ್ವಯ ಅವಶ್ಯಕತೆ ಇಲ್ಲದಿರುವುದರಿಂದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. |
| ಈ) | ಪ್ರಸ್ತುತ ಆರ್ಥಿಕ ವರ್ಷದಲ್ಲೇ ಹೊಸ ಖಾಯಂ ತಜ್ಞ ವೈದ್ಯರ ಹುದ್ದೆಗಳನ್ನು ಸೃಜಿಸಿ ನೇರ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಸರ್ಕಾರ ಸಿದ್ಧವಿದೆಯೇ; | |
| ಉ) | ಈ ಸಂಬಂಧ ಕಡತವು ಸರ್ಕಾರದ ಯಾವ ಹಂತದಲ್ಲಿದೆ? ಹಣಕಾಸು ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಥವಾ ಸಚಿವ ಸಂಪುಟದ ಅನುಮೋದನೆಗೆ ಕಳುಹಿಸಲಾಗಿದೆಯೇ? | |

**ಸಂಖ್ಯೆ: ಆಕುಕ 254 ಪಿಐಎಂ 2026**

(ಯು.ಟಿ. ಖಾದರ್ ಫರೀದ್)
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಹಾಗೂ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.